# ಪ್ರಿಯ ಹೊಸ ವರುಷವೇ...

■ ಕಾವ್ಯಾ ಕಡಮೆ



ಪ್ರಿಯ 2022,

ನೀನು ಬಂದು ತಟ್ಟಬೇಕು ಬಾಗಿಲನ್ನು ಎನ್ನುವಷ್ಟರಲ್ಲಿ ನಾವೇ ತೆರೆದು ಬಿಟ್ಟಿರುವೆವಲ್ಲ, ಒಳ ಬಿಟ್ಟುಕೊಂಡುಬಿಟ್ಟಿರುವೆವಲ್ಲ ನಿನ್ನನ್ನು! ನಿನ್ನ ಒಕ್ಕಣಿಕೆ ಹೊತ್ತ ಕ್ಯಾಲೆಂಡರುಗಳೂ ಡೈರಿಗಳೂ ಆಗಲೇ ಬಂದು ನವ ನಿರೀಕ್ಷೆಯಲ್ಲಿ ಕುಳಿತಾಗಿದೆ ಮೇಜಿನ ಮೇಲೆ. ಹೊಸ ವರ್ಷಕ್ಕೆ ನಮ್ಮ ಬದುಕಿನಲ್ಲಿ ಏನೇನು ಬದಲಾವಣೆಗಳನ್ನು ಮಾಡಿಕೊಳ್ಳಬೇಕು ಎಂಬ ಬಗ್ಗೆ ಪಟ್ಟಿಯೂ ಮಾಡಿಯಾಗಿದೆ. ಇನ್ನೇನು ದಿನಗಣನೆಯೂ ಕ್ಷಣಗಣನೆಯೂ ಶುರುವಾಗಿವೆ.

ಹಳೆಯ ವರ್ಷವೊಂದು ಹೊಸ ವರ್ಷವಾಗಿ ಬದಲಾಗುವ ಕ್ಷಣಕ್ಕೆ ಸಂಭ್ರಮದಿಂದ ಇದಿರು ನೋಡುವ ನಮಗೆ ಹೊಸ ವರ್ಷವೊಂದು ಕ್ರಮೇಣ ಸವೆದು ಹಳತಾಗುವ ಕ್ರಮ ಗೊತ್ತೇ ಆಗುವುದಿಲ್ಲವಲ್ಲ ಅಂತ ಸೋಜಿಗವಾಗುತ್ತದೆ. ಹೊಸದು ಹಳತಾಗುವ, ಹಳೆಯದು ಹೊಸತಾಗುವ ಈ ನಿರಂತರ ಚಕ್ರವನ್ನು ನಮ್ಮ ನೀರಸ ದೈನಿಕಕ್ಕೊಂದು ಥ್ರಿಲ್ ಕೊಡಲೆಂದೇ ನಾವು ಸೃಷ್ಟಿಸಿಕೊಂಡಿದ್ದೇವೆಯೋ ಏನೋ ಅಲ್ಲವೇ!

ಹೊಸ ವರ್ಷವೆಂದರೆ ಹೊಸ ಪುಟ. ಇನ್ನೂ ಯಾರೂ ಮುಟ್ಟದ, ತಲುಪದ ತಟ, ಏರದ ಅಟ್ಟ. ಶುರುವಾದ ಮೇಲೆ ದಿನಗಳೆಂಬ ಒಂದೊಂದೇ ಇಟ್ಟಿಗೆಯಿಟ್ಟು ಕಟ್ಟುವ ಆಟ. ಒಂದೊಂದೇ ವರ್ಷ ಕಳೆದುಹೋದಂತೆ ಕ್ಷಣ ಕ್ಷಣವೂ ಬದುಕಿಗೂ ಸಾವಿಗೂ ಹತ್ತಿರವಾಗುತ್ತೇವೆ. ವ್ಯಕ್ತಿಯೊಬ್ಬರು ನೂರು ವರ್ಷ ಬದುಕಿದ್ದರೂ ಕೇವಲ ಮೂವತ್ತಾರು ಸಾವಿರದ ಐದುನೂರು ದಿನಗಳಷ್ಟೇ ಬದುಕಿದಂತೆ ಅಂತೆ. ಬದುಕಿನ ಅದಮ್ಯ ಗತಿಗೆ ಹೋಲಿಸಿದರೆ ಅದೆಷ್ಟು ಸಣ್ಣ ಸಂಖ್ಯೆ ಅನ್ನಿಸುತ್ತದೆ. ಖುಷಿಯಲ್ಲಿರುವಾಗ ಬೇಗ ಬೇಗನೆ ಓಡುವ ದಿನಗಳು ಬೇನೆಯಲ್ಲಿದ್ದಾಗ ಕುಂಟುತ್ತ ನಡೆಯುತ್ತವೆ. ಅವರವರ ಸುಖ–ದುಃಖದ ಸಾಂದ್ರತೆಯ ಮೇಲೆ ಆವರವರಿಗೆ ದಕ್ಕುವ ಸಮಯದ ಓಟ!

ಇನ್ನೂ ಧರಿಸದ ಹೊಸ ಬಟ್ಟೆಯ ಹಾಗೆಯೇ ಗರಿಗರಿಯಾಗಿದೆ ಹೊಸ ವರುಷ. ಎಲ್ಲಿ ಸಡಿಲವಾಗಿದೆ, ಎಲ್ಲಿ ಬಿಗಿಯುತ್ತಿದೆ ಎಂಬುದನ್ನು ಧರಿಸಿಯೇ ತಿಳಿಯಬೇಕು. ಸಡಿಲವಾದಲ್ಲಿ ಹೊಲಿಗೆ ಹಾಕುತ್ತ, ಬಿಗಿದಲ್ಲಿ ಕಟ್ಟು ಬಿಡಿಸುತ್ತ ಅಪೂರ್ಣತೆಯಲ್ಲಿಯೇ ಇಡಿಯನ್ನು ಕಾಣುವ ಕ್ರಮವೇ ಸೊಗಸು. ಎಷ್ಟೇ ಬೀಳುತ್ತ, ಏಳುತ್ತ ಮುಂದುವರೆದರೂ ಒಂದು ವರ್ಷದ ಕೊನೆಗೆ ಚೂರಾದರೂ ಬದಲಾಯಿಸಿರುತ್ತೇವೆ, ಒಳಿತಿನೆಡೆಗೆ ಮುಖ ಮಾಡಿರುತ್ತೇವೆ ಎಂಬ ನಿರೀಕ್ಷೆಯೇ ನಮಗೆ ದಾರಿದೀಪ.

ಹೊಸ ಪುಸ್ತಕಗಳು, ನಾಟಕ–ಸಿನಿಮಾಗಳು, ಕ್ರೀಡೆಗಳು, ಹಬ್ಬಗಳೆಲ್ಲ ಉದ್ದೀಪಿಸುವ ಆಹ್ಲಾದವೇ ಬೇರೆ. ಇವೆಲ್ಲ ಬದುಕಿನ ಬಗೆಗೆ ನಮ್ಮ ಉಮೇದನ್ನು ಸಲಹುವಂಥವು. ಲೋಕ ಸೊಗಸಾಗಿದೆ, ಇರಲು ಯೋಗ್ಯವಾಗಿದೆ ಎಂಬ ನಂಬಿಕೆಯನ್ನು ಚಿಗುರಿಸುವಂಥವು. ಆದರೂ ನಮ್ಮ ಸುತ್ತಲೂ ನಮಗೆ ಸಂಬಂಧವೇ ಪಡದಂತೆ ಕಾಣುವ ಎಷ್ಟೊಂದು ಸಂಗತಿಗಳು ನಡೆಯುತ್ತಲೇ ಇರುತ್ತವಲ್ಲ, ಗೊತ್ತಾಗದೇ ನಮ್ಮ ನಿರ್ಧಾರಗಳಿಗೂ ದಿಕ್ಸೂಚಿಯಾಗಿ ಕೆಲಸ ಮಾಡುತ್ತವಲ್ಲ...

ಸಮಯ ತಪ್ಪಿ ಬಂದ ಮಳೆ ಎಷ್ಟೋ ಜನರ ಕನಸುಗಳನ್ನು ನುಚ್ಚು ನೂರಾಗಿಸುತ್ತದೆ, ಮನೆ ಎಂಬ ತಾಣವೇ ಎಲ್ಲಿಯೂ ಇಲ್ಲದ ಹಾಗೆ ದೇಶದ ಗಡಿಗಳಿಂದ ಹೊರಬಿದ್ದ ಸಾವಿರಾರು ನಿರಾಶ್ರಿತರು ದನಿಯಿಲ್ಲದೇ ಉಡುಗಿ ಹೋಗಿದ್ದಾರೆ, ರಾಜಕಾರಣಿಗಳು ಸಭ್ಯತೆಯ ಮುಖವಾಡ ಕಳಚಿ ಕ್ಯಾಮೆರಾದ ಎದುರಿಗೆ ತಮ್ಮ ಮನಸ್ಸಿನ ಬಣ್ಣ ತೋರಿಸುತ್ತಾರೆ, ಲಸಿಕೆಯ ಕುರಿತು, ವೈರಾಣುವಿನ ಕುರಿತು ನೂರಾರು ಸುಳ್ಳು ಸುದ್ದಿಗಳು ಧಾವಂತದಲ್ಲಿಯೇ ಹರಡುತ್ತವೆ, ವಿಜ್ಞಾನದ ಮೂಲಗುಣವಾದ ಅನಿಶ್ಚಿತತೆಯನ್ನೇ ಪ್ರಶ್ನಿಸುತ್ತ ಸುಲಭವಾಗಿ ನಂಬಲಾಗುವ ಮೂಢನಂಬಿಕೆಗಳನ್ನೇ ಎತ್ತಿ ಹಿಡಿಯಲಾಗಿದೆ. ಈ ಎಲ್ಲದರ ನಡುವೆ ಜಾಗತಿಕ ತಾಪಮಾನ ಏರಿಕೆಯ ದುಷ್ಪರಿಣಾಮಗಳಿಗೆ ಮುಖವೊಡ್ಡಿಯೂ ಅಂಥದೊಂದು